ಶ್ರೀ ವಾಟಾಳ್ ನಾಗರಾಜ್: ಇವತ್ತು ಅವಕಾಶ ಕೊಟ್ಟುಬಿಡಿ ಸರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಇವತ್ತೆ ಶೂನ್ಯ ವೇಳೆಯಲ್ಲಿ ಮಾತನಾಡ ಬೇಕಾದ ಮಹತ್ವದ ವಿಷಯ ಇರುತ್ತದೆ.

ಅಧ್ಯಕ್ಷರು: ವಿಷಯ ಮಂಡನೆ ಆಗಿದೆ. ನಾಳೆ ತಮಗೆ ಅವಕಾಶ ಕೊಡೋಣ.

ಶ್ರೀ ವಾಟಾಳ್ ನಾಗರಾಜ್: ಗಂಭೀರವಾದ ವಿಷಯವಿರುವುದರಿಂದ ಇವತ್ತೆ ಅವರಿಗೆ ಅವಕಾಶ ಕೊಡಿ ಸರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಸರ್.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರಿಗೆ ಅವಕಾಶ ಕೊಡಿ ಸರ್. ಅದಕ್ಕೇನಂತೆ.

ಅಧ್ಯಕ್ಷರು: ಆಯಿತು. ಅವಕಾಶ ಕೊಡುತ್ತೇನೆ. ಈಗ ಎರಡು ಅಥವಾ ಮೂರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಎಲ್ಲದನ್ನೂ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾಳೆ ಸ್ವಲ್ಪ ನಾಡಿದ್ದು ಸ್ವಲ್ಪ ಹೀಗೆ ಎಲ್ಲರಿಗೆ ಅವಕಾಶ ಕೊಡುತ್ತೇನೆ. ದಯಮಾಡಿ ಎಲ್ಲರು ಸಹಕರಿಸಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:–

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಒಂದು ಅಮಾನವೀಯ ಮತ್ತು ಇಡೀ ನಾಗರಿಕ ಸಮಾಜ, ನಾವೆಲ್ಲರೂ ತಲೆತಗ್ಗಿಸಬೇಕಾದಂಥ ಘಟನೆ ದಿ:18–06–05ರಂದು ನಡೆದಿದೆ. ಸುಮಾರು 12 ಗಂಟೆ ಸಮಯದಲ್ಲಿ ಹೈಸ್ಕೂಲ್ ವಿದ್ಯಾರ್ಥಿನಿಯೊಬ್ಬಳು ತನ್ನ ಮಾರ್ಕ್ಸ್‌ಕಾರ್ಡ್ ಮತ್ತು ಟಿ.ಸಿ. ತೆಗೆದುಕೊಳ್ಳಲು ಶಾಲೆ ಆವರಣಕ್ಕೆ ಹೋಗಿ ಕುಳಿತಿದ್ದಾಳೆ. ಅಲ್ಲಿಗೆ ಬಂದಂಥ ಒಬ್ಬ ಹುಡುಗನ ಜೊತೆ ಮಾತನಾಡುತ್ತಾ ಕುಳಿತಿದ್ದಾಳೆ. ಅಲ್ಲಿಗೆ ಅಮ್ಜಾದ್ ಎನ್ನುವ ಒಬ್ಬ ಹುಡುಗ ಬಂದು ಮದುವೆಯಾಗದಿರುವ ಹುಡುಗಿ ಇನ್ನೊಬ್ಬ ಗಂಡಸಿನ ಜೊತೆ

ಮಾತನಾಡಬೇಡವೆಂದು ಹೇಳಿ, ಆ ಹುಡುಗಿಗೆ ಬೆದರಿಕೆ ಹಾಕಿ, ನಾನು ನಿಮ್ಮ ಮನೆಯಲ್ಲಿ ಬಿಟ್ಟು ಬರುತ್ತೇನೆ; ವ್ಯಾನ್‌ನಲ್ಲಿ ಕುಳಿತುಕೋ ಎಂದು ಹೇಳಿ ವ್ಯಾನ್‌ನಲ್ಲಿ ಕೂರಿಸಿದ್ದಾನೆ. ಅವಳು ನಾನು ಕುಳಿತುಕೊಳ್ಳುವುದಿಲ್ಲವೆಂದು ಹೇಳಿ ಪ್ರತಿಭಟನೆ ಮಾಡಿದ್ದಾಳೆ. ಆಗ ಅವಳ ಜೊತೆ ಮಾತನಾಡುತ್ತಿದ್ದ ಹುಡುಗ ಯಾರು ಎಂದರೆ, ಆ ಹುಡುಗಿಯನ್ನು ಮದುವೆಯಾಗಲು ನಿಶ್ಚಯ ವಾಗಿದ್ದಾತ. ಆ ಹುಡುಗಿ ಜೊತೆ ಅವನಿಗೆ ಎಂಗೇಜ್‌ಮೆಂಟ್ ಆಗಿದೆ. ಅವರಿಬ್ಬರೂ ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ಅಮ್ಜಾದ್ ಎನ್ನುವವ ಬಂದು ಮದುವೆಯಾಗದಿರುವ ಹುಡುಗಿ ಬೇರೆ ಗಂಡಸಿನ ಜೊತೆ ಮಾತನಾಡಬಾರದೆಂದು ಹೇಳಿ ಅವಳನ್ನು ಬೆದರಿಸಿ, ಅವರಿಬ್ಬರನ್ನೂ ವ್ಯಾನ್‌ನಲ್ಲಿ ಕೂರಿಸಿ, ಮನೆಯಲ್ಲಿ ಬಿಟ್ಟು ಬರುತ್ತೇನೆಂದು ಹೇಳಿ, ವ್ಯಾನ್ ಹತ್ತಿಸಿ ಬಸ್‌ಸ್ಟಾಂಡ್‌ಗೆ ಡ್ರೈವ್ ಮಾಡುತ್ತಿದ್ದವನು, ಬಸ್‌ಸ್ಟಾಂಡ್‌ಗೆ ಹೋಗಿ; ಅಲ್ಲಿಗೆ ಹೋದಮೇಲೆ ಅಮ್ಜಾದ್ ಎನ್ನುವವ ದ್ವಿಚಕ್ರ ವಾಹನದಲ್ಲಿ ಫಾಲೋ ಮಾಡಿದ್ದಾನೆ. ವಾಹನ ಅಲ್ಲಿಗೆ ಹೋದ ಮೇಲೆ ಇವನು ಫೋನ್ ಮಾಡಿ, ಗೂಂಡಾಗಳನ್ನು ಕರೆಸಿ, ವ್ಯಾನ್ ಅಲ್ಲಿ ನಿಲ್ಲಿಸಿ, ಆ ವ್ಯಾನ್‌ನಲ್ಲಿದ್ದಂಥ ಹುಡುಗ, ಯಾರು ಎಂಗೇಜ್‌ಮೆಂಟ್ ಆಗಿತ್ತು, ಆ ಹುಡುಗನನ್ನು ವ್ಯಾನ್‌ನಿಂದ ಕೆಳಗಡೆ ಇಳಿಸಿ, ಹೊಡೆದು, ಅವನ ಕೈ ಬೆರಳು ಕತ್ತರಿಸಿ, ಆಚೆಗೆ ತಳ್ಳಿ, ಆ ಹುಡುಗಿಯನ್ನು ವ್ಯಾನ್‌ನಲ್ಲಿ ಕೂರಿಸಿಕೊಂಡು ಚಿಂತಾಮಣಿ ರಸ್ತೆಗೆ ಹೋಗಿ ರಸ್ತೆಯಲ್ಲಿ ಹೋಗುವಾಗ ವ್ಯಾನ್‌ನಲ್ಲೇ ಆ ಹುಡುಗಿಯನ್ನು ಬೆದರಿಸಿ ಬಟ್ಟೆ ಬಿಚ್ಚಿಸಿ, ಅವನ ಮೊಬೈಲ್ ಕ್ಯಾಮೆರಾದಲ್ಲಿ ಫೋಟೋ ತೆಗೆದು ನೀವು ನಾನು ಹೇಳಿದ ಹಾಗೆ ಕೇಳದಿದ್ದರೆ, ಇದನ್ನು ಬ್ಲೂ ಫಿಲಂ ಮಾಡಿ ನಿನ್ನನ್ನು ಬೆದರಿಸುತ್ತೇನೆಂದು ಹೇಳಿ, ಅವಳನ್ನು ಬಲಾತ್ಕಾರ ಮಾಡಿ, ಮಾನಭಂಗ ಮಾಡಿದ್ದಾನೆ. ಆಮೇಲೆ, ಇವನು ಡ್ರೈವರ್ ಸೀಟಿಗೆ ಹೋಗಿ, ಅವನು ಬಂದು ಮತ್ತೆ ವ್ಯಾನ್‌ನಲ್ಲೇ ಅತ್ಯಾಚಾರವೆಸಗಿದ್ದಾನೆ. ಆಮೇಲೆ, 5 ಗಂಟೆಗೆ ತೆಗೆದುಕೊಂಡು ಬಂದು ಸ್ಕೂಲ್ ಹತ್ತಿರ ಬಿಟ್ಟು ನೀನು ಇದನ್ನು ಯಾರಿಗಾದರೂ ಹೇಳಿದರೆ ನಾನು ಕ್ಯಾಮರಾದಲ್ಲಿ ಫೋಟೋ ತೆಗೆದಿದ್ದೇನೆ, ಅದನ್ನು ಎಲ್ಲರಿಗೂ ತೋರಿಸಿ, ನಿನ್ನನ್ನು ಇದು ಮಾಡುತ್ತೇನೆ ಎಂದು ಹೆದರಿಸಿ 100 ರೂಪಾಯಿಯ ನೋಟು ಕೊಟ್ಟು ಮನೆಗೆ ಕಳುಹಿಸಿದ್ದಾನೆ. ಆ ಹುಡುಗಿ ಅಪಮಾನ ತಾಳಲಾರದೆ ಅವತ್ತು ರಾತ್ರಿ ಅಂದರೆ 18ನೇ ತಾರೀಖು ಮಧ್ಯರಾತ್ರಿ ಮನೆಯಲ್ಲಿ ನೇಣು ಹಾಕಿಕೊಳ್ಳಲು ಹೋಗಿದ್ದಾಳೆ. ಅವಳಿಗೆ ತಂದೆ ಇಲ್ಲ. ತಾಯಿ ಮಾತ್ರ ಇದ್ದಾಳೆ. ತಾಯಿ ಮತ್ತು ಅವಳು ಇಬ್ಬರೂ

ಮಲಗಿರುವ ಸಂದರ್ಭದಲ್ಲಿ, ಮಧ್ಯ ರಾತ್ರಿಯಲ್ಲಿ ನೇಣು ಹಾಕಿಕೊಳ್ಳಲು ಹೋದಾಗ, ತಾಯಿ ನೋಡಿ ಗಾಬರಿಯಾಗಿ ಓಡಿ ಬಂದು ಏಕೆ ನೇಣು ಹಾಕಿಕೊಳ್ತೀಯ ಎಂದು ಕೇಳಿದರೆ, ಆ ಸಂದರ್ಭದಲ್ಲಿ ನಡೆದಿರುವ ಘಟನೆಯನ್ನು ವಿವರವಾಗಿ ಆ ಹುಡುಗಿ ಹೇಳಿದ್ದಾಳೆ. ಆ ತಾಯಿ ಅವಳನ್ನು ಆತ್ಮಹತ್ಯೆ ಮಾಡಿಕೊಳ್ಳದಂತೆ ತಡೆಹಿಡಿದು, ಕೈಕಾಲು ಹಿಡಿದು ಬೇಡಿಕೊಂಡು ಬೆಳಗ್ಗೆ ಪಾಪ, ಹೆಣ್ಣು ಮಗಳು ಯಾರಿಗೆ ಹೇಳುವುದೆಂದು, ಮುಸ್ಲಿಂ ಸಮುದಾಯದ ಕೆಲವು ದೊಡ್ಡ ಯಜಮಾನರು ಯಾರಿದ್ದಾರೆ, ಅವರ ಹತ್ತಿರ ಹೋಗಿ, ನನ್ನ ಮಗಳಿಗೆ ಹೀಗಾಗಿದೆ ಎಂದು ಗೋಳಾಡಿದ್ದಾಳೆ. ಅವರೇನು ಮಾಡಿದ್ದಾರೆಂದರೆ, ಅವನನ್ನು ಕರೆಸಿ ಪಂಚಾಯಿತಿ ಮಾಡಬೇಕೆಂದು ಹೇಳಿ ಪ್ರಯತ್ನ ಮಾಡಿದ್ದಾರೆ. ಅದು 19ನೇ ತಾರೀಖಿನ ಬೆಳಿಗ್ಗೆ. ಆದರೆ, ಅವನು ಬರಲಿಲ್ಲ. ಬರುವುದಿಲ್ಲವೆಂದು ಹೇಳಿ ಕಳುಹಿಸಿದ್ದಾನೆ. ಕಡೆಗೆ, ಸಂಜೆ 6ಗಂಟೆ ಹೊತ್ತಿಗೆ ಜನರಿಗೆ ಗೊತ್ತಾಗಿ, ಸಾರ್ವಜನಿಕರು ತಿರುಗಿ ಬಿದ್ದು, ಅವನ ಮನೆ ಮೇಲೆ ನೂರಾರು ಜನರು ದಾಳಿ ಮಾಡಿದ್ದಾರೆ. ಅಷ್ಟರವರೆಗೂ ಅಂದರೆ, ಇದು 18ನೇ ತಾರೀಖು ಮಧ್ಯಾಹ್ನ 12 ಗಂಟೆಗೆ ನಡೆದಿರುವ ಘಟನೆ, 19ನೇ ತಾರೀಖು ಸಂಜೆ 6.30 ಗಂಟೆಯಲ್ಲಿ ಸಾರ್ವಜನಿಕರೆಲ್ಲ ರೊಚ್ಚಿಗೆದ್ದು ಅವನ ಮನೆ ಮೇಲೆ ಬೀಳಲಿಕ್ಕೆ ಹೋದಾಗ ಪೋಲಿಸರು ಪ್ರವೇಶ ಮಾಡಿದ್ದಾರೆ. ಅಂದರೆ 32 ಗಂಟೆವರೆಗೂ ಕೂಡ ಪೊಲೀಸರಿಗೆ ಆ ವಿಚಾರ ಗೊತ್ತಿಲ್ಲ. ಪೊಲೀಸ್ ಸ್ಟೇಷನ್‌ಗೂ, ಘಟನೆ ನಡೆದಿರುವ ಸ್ಥಳಕ್ಕೆ ಎಷ್ಟು ದೂರವಿದೆ ಎಂದರೆ, ಕೇವಲ 100 ಮೀಟರ್ ದೂರವಿದೆ. ಪೊಲೀಸ್ ಸ್ಟೇಷನ್ ಮುಂದೆ ಕಾಲೇಜ್, ಹೈಸ್ಕೂಲ್ ಇದೆ. ಅಲ್ಲಿಂದ ಕಿಡ್ನ್ಯಾಪ್ ಮಾಡಿರುವುದು. ಗಲಾಟೆಯಾಗಿರುವುದು ಅದರ ಪಕ್ಕದ ಅವನ ಮನೆಯ ಪಕ್ಕದಲ್ಲಿ ಆಗಿದೆ. ಪೊಲೀಸರೇನು ಮಾಡಿದರು, ಗಲಾಟೆ ಮಾಡಿದ ಸಂದರ್ಭದಲ್ಲಿ ಪೊಲೀಸ್‌ನವರು ಅವನ ಜೊತೆ ಶಾಮೀಲಾಗಿದ್ದಾರೆ. ಏಕೆಂದರೆ, ಅವನು ಅಲ್ಲಿ ಫೈನಾನ್ಸ್ ನಡೆಸುತ್ತಾನೆ. ಪೊಲೀಸ್‌ನವರಿಗೂ ಸಹ ಸಾಲ ಕೊಡುತ್ತಾನೆ. ಸುಮಾರು ಪೊಲೀಸ್‌ನವರಿಗೆ ಸಾಲ ಕೊಟ್ಟಿದ್ದಾನೆ. ಇವರೆಲ್ಲಾ ಯೋಜನೆ ಮಾಡಿ, ಜನ ರೊಚ್ಚಿಗೆದ್ದು ಅವನನ್ನು ಹಿಡಿಯುತ್ತಾರೆಂದು ಅವನ ಮನೆಗೆ ರಕ್ಷಣೆ ಕೊಡುವ ಹೆಸರಿನಲ್ಲಿ ಪೊಲೀಸ್‌ನವರು ಲೈನ್ ಆಗಿ ನಿಂತು ಹಿಂಬಾಗಿಲಿನಲ್ಲಿ ತಪ್ಪಿಸಿದ್ದಾರೆ. ಅವನು ಮನೆ ಬಿಟ್ಟು ಖಾಲಿ ಮಾಡಿ ಹೊರಟು ಹೋಗುವವರೆಗೂ ಪೋಲೀಸ್‌ನವರು ಅಲ್ಲಿಂದ ಜಾಗ ಖಾಲಿ ಮಾಡಿಲ್ಲ. ಅವನು ಹೊರಟು

ಹೋದ ಮೇಲೆ ಇವರ ಮೇಲೆ ಲಾಠಿ ಚಾರ್ಜ್ ಮಾಡಿ ಸಾರ್ವಜನಿಕರನ್ನು ಓಡಿಸಿದ್ದಾರೆ. ಇದು 19 ನೇ ತಾರೀಖು ರಾತ್ರಿ 8 ಗಂಟೆಯಲ್ಲಿ ನಡೆದ ಘಟನೆ. ಮತ್ತೆ, 20ನೇ ತಾರೀಖು ಕೂಡ ಪೊಲೀಸ್‌ನವರು ಕೇಸ್ ರಿಜಿಸ್ಟರ್ ಮಾಡಿಲಿಲ್ಲ. ಯಾವುದೇ ರೀತಿಯಾದ ಬಂಧನ ಅರೆಸ್ಟ್ ಮಾಡಿಲ್ಲ. ಆ ಸಂದರ್ಭದಲ್ಲಿ ಶಿಡ್ಲಘಟ್ಟ ತಾಲ್ಲೂಕಿನ ಅಂಗನವಾಡಿ ನೌಕರರೇನು ಇದ್ದಾರೆ, ಆ ಹೆಣ್ಣು ಮಕ್ಕಳಿಗೆ ಗೊತ್ತಾಗಿ ಆ ಹೆಣ್ಣು ಮಗಳಿಗೆ ಅನ್ಯಾಯವಾಗಿದೆ, ಕ್ರಮ ತೆಗೆದುಕೊಳ್ಳಬೇಕೆಂದು ಪೊಲೀಸ್ ಸ್ಟೇಷನ್ ಮುಂದೆ ಧರಣಿ ಕುಳಿತಿದ್ದಾರೆ. ಅವರು 6 ಗಂಟೆವರೆಗೆ ಧರಣಿ ಕುಳಿತಿದ್ದಾರೆ. ಆ ಸಂದರ್ಭದಲ್ಲಿ ನಾನು ಸನ್ಮಾನ್ಯ ಕಾರ್ಮಿಕ ಮಂತ್ರಿಗಳ ಕೋಣೆಯಲ್ಲಿ ಬೇರೆ ಯಾವುದೋ ವಿಚಾರ ಮಾತನಾಡುತ್ತಾ ಕುಳಿತಿದ್ದೆ. ನನಗೆ ಫೋನ್ ಬಂತು. ಆ ಗಾಬರಿ ನೋಡಿ ಮಾನ್ಯ ಮಂತ್ರಿಗಳು ಏನಾಯಿತೆಂದು ಕೇಳಿದರು. ಸಾರ್, ಹೀಗಾಗಿದೆ ಎಂದು ಹೇಳಿದೆ. ಅವರು ತಕ್ಷಣ ಡಿ.ವೈ.ಎಸ್.ಪಿ.ಯವರಿಗೆ ಫೋನ್ ತೆಗೆದುಕೊಂಡು ಫೋನ್ ಮಾಡಿದರು. ಹೇ. ಏನು ಮಾಡುತ್ತಿದ್ದೀರಿ, ಘಟನೆ ನಡೆದು 2 ದಿವಸಗಳಾಗಿದೆ, ತಕ್ಷಣ ಹೋಗಿ ಎಂದು ಹೇಳಿದರು. ಮತ್ತೆ ನಾನು ಫೋನ್ ಮಾಡಿದೆ. ಅಲ್ಲಿಗೂ ಹೋಗಲಿಲ್ಲ. ನಾನು ಮತ್ತೆ ರಾತ್ರಿ 9 ಗಂಟೆಗೆ ಶಿಡ್ಲಘಟ್ಟ ಪೋಲೀಸ್ ಸ್ಟೇಷನ್‌ಗೆ ಹೋದರೆ ಅವನ ಮೇಲೆ ಇದುವರೆಗೂ ಕೇಸ್ ಬುಕ್ ಮಾಡಿಲ್ಲ. ಎಫ್‌ಐಆರ್ ಹಾಕಿರಲಿಲ್ಲ. ನಾನು 9 ಗಂಟೆಗೆ ಪೊಲೀಸ್ ಸ್ಟೇಷನ್‌ಗೆ ಹೋಗಿ 10 ಗಂಟೆವರೆಗೂ ಅವರ ಜೊತೆ ಮಾತನಾಡಿ, ಚರ್ಚೆ ಮಾಡಿ, ಗಲಾಟೆ ಮಾಡಿದ ಮೇಲೆ 10.30 ಕ್ಕೆ ಪೊಲೀಸ್ ಸ್ಟೇಷನ್‌ನಲ್ಲಿ ಎಫ್‌ಐಆರ್ ರಿಜಿಸ್ಟರ್ ಮಾಡುತ್ತಾರೆ. ಆಮೇಲೆ, 21ನೇ ತಾರೀಖು ಇಷ್ಟೆಲ್ಲಾ ಘಟನೆ ನಡೆದಿದೆ. ಸಾರ್ವಜನಿಕರೆಲ್ಲ ರೊಚ್ಚಿಗೆದ್ದಿದ್ದಾರೆ. ಸ್ಥಳಕ್ಕೆ ಯಾವ ಅಧಿಕಾರಿಯೂ ಹೋಗಲಿಲ್ಲ. ಯಾವ ಮಂತ್ರಿಗಳೂ ಹೋಗಲಿಲ್ಲ. 22ನೇ ತಾರೀಖು ಮಾನ್ಯ ಶಂಕರ ಬಿದರಿಯವರು ಅಲ್ಲಿಗೆ ಹೋಗುತ್ತಾರೆ. ಶಂಕರ ಬಿದರಿಯವರು, ಐ.ಜಿ. ಆ ಗಲಾಟೆಯಾಗಿರುವ, ಯಾರ ಮನೆ ಮೇಲೆ ಸಾರ್ವಜನಿಕರು ರೊಚ್ಚಿಗೆದ್ದಿದ್ದಾರೋ, ಅವನ ಮನೆ ನೋಡಿಕೊಂಡು ಬರುತ್ತಾರೆ. ಹೊರತು, ಮುಗ್ಧ ಹುಡುಗಿ, ಅವಳಿಗಿನ್ನೂ 15 ವರ್ಷ, ಅವಳು ಆಸ್ಪತ್ರೆಯಲ್ಲಿದ್ದಾಳೆ, ಪೊಲೀಸ್ ಸ್ಟೇಷನ್ ಎದುರುಗಡೆ ಆಸ್ಪತ್ರೆ ಇದೆ, ಅಲ್ಲಿಗೆ ಶಂಕರ ಬಿದರಿಯವರು ಹೋಗುವುದಿಲ್ಲ. ಅದಕ್ಕೋಸ್ಕರ ಸಾರ್ವಜನಿಕರೇನು ಮಾಡಿದ್ದಾರೆಂದರೆ, ಅಪರಾಧಿಗಳನ್ನು ರಕ್ಷಣೆ ಮಾಡಲು ನೀವು ಬಂದಿದ್ದೀರಿ, ಒಬ್ಬ ಹೆಣ್ಣು ಮಗಳ ಮೇಲೆ ಅತ್ಯಾಚಾರ ನಡೆದು, ಆ ಮುಗ್ಧ ಬಾಲಕಿ

ಆಸ್ಪತ್ರೆಯಲ್ಲಿದ್ದರೆ ಅವಳನ್ನು ವಿಚಾರಿಸಲು ಹೋಗಲಿಲ್ಲವೆಂದು ಹೇಳಿ ನೀವೆಲ್ಲರೂ ಇರುವುದು ಅವನನ್ನು ರಕ್ಷಣೆ ಮಾಡಲು, ಪೊಲೀಸನವರೆಲ್ಲ ಅವನ ಮನೆ ಸುತ್ತಲು ಕಾವಲು ಇಟ್ಟಿದ್ದೀರಿ ಎಂದು ಹೇಳಿ ಸಾರ್ವಜನಿಕರು ರೊಚ್ಚಿಗೆದ್ದಿದ್ದಾರೆ. ರೊಚ್ಚಿಗೆದ್ದು ಗಲಾಟೆಯಾದಾಗ, ಮತ್ತೆ ಲಾಠಿಚಾರ್ಜ್ ಮಾಡಿದ್ದಾರೆ. ಲಾಠಿ ಚಾರ್ಜ್ ಮಾಡಿದರೆ ಮತ್ತೆ ಸಾರ್ವಜನಿಕರು ಏನು ಮಾಡಿದ್ದಾರೆ. ಆ ಸಿಟ್ಟಿಗೆ ಹೆಚ್ಚು ಗಲಾಟೆ ಶುರುವಾದಾಗ, ರಾತ್ರಿ 10.30ರಲ್ಲಿ ಗೋಲಿಬಾರ್ ಆಯಿತು. 5 ಸುತ್ತು ಗುಂಡು ಹಾರಿಸಿದ್ದಾರೆ. 3 ಜನ ಮುಗ್ಧರಿಗೆ ಗೋಲಿಬಾರ್‌ನಲ್ಲಿ ಗಾಯವಾಗಿದೆ. ಪೊಲೀಸ್‌ನವರಿಗೂ ಏಟಾಗಿದೆ. ಅದು ನಡೆದಿದ್ದು 22 ನೇ ತಾರೀಖು ರಾತ್ರಿ. 22 ನೇ ತಾರೀಖು ಗೋಲಿಬಾರ್ ಆಗಿದೆ. 18ನೇ ತಾರೀಖು ಹುಡುಗಿ ಮೇಲೆ ಆ ಘಟನೆ ನಡೆದಿದೆ. 18, 19, 20, 21, 22 ಯಾವ ಮಂತ್ರಿಯೂ ಆ ಕಡೆ ಹೋಗಲಿಲ್ಲ. ಯಾವ ಅಧಿಕಾರಿಯೂ ಆ ಕಡೆ ಹೋಗಲಿಲ್ಲ. 22ನೇ ತಾರೀಖು ಗೋಲಿಬಾರ್ ಆಯಿತೆಂದು ಹೇಳಿ, 23ನೇ ತಾರೀಖು ಪತ್ರಿಕೆಯಲ್ಲಿ ಬಂದ ಮೇಲೆ ಸಂಜೆ ಮತ್ತೆ ಶಂಕರ ಬಿದರಿಯವರು ಬರುತ್ತಾರೆ. ನಾನು ಖುದ್ದಾಗಿ ಅಲ್ಲಿಗೆ ಹೋದೆ. ನಾನು ಹೋಗಿ ಏಕೆ ನೀವು ಗೋಲಿಬಾರ್ ಮಾಡಿದಿರಿ ಎಂದು ಕೇಳಿದೆ. ಗೋಲಿಬಾರ್ ಮಾಡಿದ್ದೂ ಅಲ್ಲದೆ, ಆ ಗೋಲಿಬಾರ್‌ಗೆ ಸಂಬಂಧವಿಲ್ಲದಿರುವ ರೇಷ್ಮೆ ಕಾರ್ಮಿಕರು 2 ಕಿಲೋಮೀಟರ್ ದೂರದಲ್ಲಿದ್ದಾರೆ, ಅವರ ಮನೆಯಲ್ಲಿದ್ದಾರೆ ಅವರ ಮನೆಗಳಿಗೆ ರಾತ್ರಿ ನುಗ್ಗಿ ಮನೆಗಳ ಬಾಗಿಲು ಒಡೆದು ಮಲಗಿದ್ದಂಥ ಮುಗ್ಧರೆಲ್ಲರನ್ನೂ ಎಳೆದುಕೊಂಡು ಬಂದು 20 ಜನರನ್ನು ಪೊಲೀಸ್ ಸ್ಟೇಷನ್‌ಗೆ ಹಾಕುತ್ತಾರೆ. ಆ ಗಲಭೆಗೂ ಅವರಿಗೂ ಸಂಬಂಧವಿಲ್ಲ. ಗಲಭೆ ನಡೆದಿರುವುದು ಪೊಲೀಸ್ ಸ್ಟೇಷನ್‌ನಿಂದ 100 ಮೀಟರ್ ದೂರದಲ್ಲಿ. ಹಿಡಿದುಕೊಂಡು ಬಂದಿರುವುದು 3 ಕಿಲೋಮೀಟರ್ ದೂರದಲ್ಲಿ ರೇಷ್ಮೆ ರೀಲಿಂಗ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು. ಅವರ ಮನೆಗಳಿಗೆ ನುಗ್ಗಿ ಮುಗ್ಧರನ್ನು ಹಿಡಿಸಿಕೊಂಡು ಬಂದಿದ್ದಾರೆ. ನಾನು ಶಂಕರ ಬಿದರಿಯವರನ್ನು ಪ್ರಶ್ನೆ ಮಾಡಿದರೆ, ಪೊಲೀಸ್ ಸ್ಟೇಷನ್‌ಗೆ ಬಂದ ತಕ್ಷಣ ಎಲ್ಲರೂ ನಿರಪರಾಧಿಗಳಾಗ್ತಾರೆ, ನಿಮ್ಮಂಥವರೆಲ್ಲ ರೆಕಮೆಂಡೇಷನ್‌ಗೆ ಬರ್ತಾರೆಂದು ಹೇಳುತ್ತಾರೆ–ಆ ಮನುಷ್ಯ. ಯಾವ ರೀತಿ ನೋಡಿ? ಅಲ್ಲೊಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ದಾಸಪ್ಪ ಎಂದು ಇದ್ದಾನೆ. ಸಾರ್ವಜನಿಕರೆಲ್ಲರೂ ಹೋಗಿ ಒತ್ತಾಯ ಮಾಡಿದರೆ, ಅವನು ಹೇಳಿರುವ ಪದ, ನಾಗರಿಕ ಸಮಾಜ ತಲೆತಗ್ಗಿಸಬೇಕು. ಅವನು ಏನು ಉತ್ತರ ಕೊಡುತ್ತಾನೆ ಗೊತ್ತೆ? 12 ಗಂಟೆಯಲ್ಲಿ

ಹೋದಳು, 4 ಗಂಟೆಯಲ್ಲಿ ಬಂದಳು, ಏನಾಯ್ತೀ ನಿಮಗೆ, ವ್ಯಾನ್‌ನಲ್ಲಿ ಹೋದಳು, ವ್ಯಾನ್‌ನಲ್ಲಿ ಬಂದಳು, ಏನಾಯಿತು ನಿಮಗೆ? ಎಂದು ಕೇಳುತ್ತಾನೆ, ಆ ಸರ್ಕಲ್ ಇನ್ಸ್‌ಪೆಕ್ಟರ್.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮುಂದು.... ಅಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರ್ ಆದ ದಾಸಪ್ಪ ಅದೇ ಪದವನ್ನು ಉಪಯೋಗಿಸುತ್ತಾನೆ. 12 ಗಂಟೆಯಲ್ಲಿ ಹೋದಳು 4 ಗಂಟೆಯಲ್ಲಿ ವಾಪಸ್ ಬಂದಳು, ನಿಮಗೀಗ ಏನಾಯಿತು? ಎಲ್ಲಾ ಹುಡುಗ–ಹುಡುಗೀರು ಹೋದ ಹಾಗೆ ಹೋಗಿ ಬಂದಿದ್ದಾರೆಂದು ಅವನು ಮಾತನಾಡುತ್ತಾನೆ. ಅವನೇ ಎಲ್ಲಾ ಕಿಂಗ್‌ಪಿನ್ ಎಲ್ಲಾ ಶಾಮೀಲಾಗಿರತಕ್ಕಂಥದ್ದು. 23ನೇ ತಾರೀಖಿನ ದಿನದಂದು ಪತ್ರಿಕೆಯಲ್ಲಿ ನೋಡಿ ಅಲ್ಲಿಗೆ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಆಗ ಬರುತ್ತಾರೆ. ಪಾಪ ಆ ಹುಡುಗಿ ರೇಪ್ ಆದಾಗ ಬರಲಿಲ್ಲ. ಸಾರ್ವಜನಿಕರು ರೊಚ್ಚಿಗೆದ್ದಾಗ ಬರಲಿಲ್ಲ. ಪೊಲೀಸ್‌ನವರು ಗೋಲಿಬಾರ್ ಮಾಡಿ ಏಟಾಯಿತು ಎಂದಾಕ್ಷಣ ಮಾನ್ಯ ಕೃಷಿ ಸಚಿವರು ಅಲ್ಲಿ ಹಾಜರಾದರು. ಅಲ್ಲಿ ಇವರು ಶಾಂತಿ ಸಭೆ ಮಾಡಲಿಕ್ಕೆ ಬರುತ್ತಾರೆ. 18, 19, 20, 21, 22ರಂದು ಮಾನ್ಯ ಉಸ್ತುವಾರಿ ಸಚಿವರು ಪತ್ತೆಯೇ ಇಲ್ಲ. ಅಂದರೆ ಇವರು ಯಾರ ಪರವಾಗಿ ವಕಾಲತ್ತು ವಹಿಸಲಿಕ್ಕೆ ಬಂದರು? ಸನ್ಮಾನ್ಯ ಅಧ್ಯಕ್ಷರೇ ತಾವು ಆಲೋಚನೆ ಮಾಡಿ, ಘಟನೆ ನಡೆದು ನಾಲ್ಕು ದಿವಸಗಳಾದವು, ದಿನ ಪತ್ರಿಕೆಯಲ್ಲಿ ಅತ್ಯಾಚಾರದ ಬಗ್ಗೆ ಬರುತ್ತದೆ, ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಎಲ್ಲರೂ ಸೇರಿಕೊಂಡು ಪ್ರತಿಭಟನೆ ಮಾಡಿದ್ದಾರೆ. ಯಾರೂ ಆ ಕಡೆ ಬರಲಿಲ್ಲ. ಮೈನರ್ ಗರ್ಲ್ ಬೇರೆ ಅವಳು. ನಂತರ ಪೊಲೀಸ್ ಸ್ಟೇಷನ್‌ನಲ್ಲಿ ಅವರನ್ನು ಬಂಧನ ಮಾಡಬೇಕೆಂದು ನಾವು ಕೇಳಿದರೆ, ಪೊಲೀಸ್‌ನವರು 506 ಕೇಸ್ ಹಾಕುತ್ತಾರೆ. ಎಂಗೇಜ್‌ಮೆಂಟ್ ಆಗಿರತಕ್ಕಂಥ ಹುಡುಗನ ತಂದೆ, ಅವರ ಮನೆಯ ಮೇಲೆ ದಾಳಿ ಮಾಡಲಿಕ್ಕೆ ಹೋದಾಗ ಅಡ್ಡ ಹೋದರೆ, ಅಮ್ಜಾದ್‌ನ ಗೂಂಡಾಗಳು ಚಾಕು ತೆಗೆದು ಬೆನ್ನಿಗೆ ಇರಿದಿದ್ದಾರೆ, ಕೈಯಲ್ಲಿ ತಿವಿದಿದ್ದಾರೆ, ಅದಕ್ಕೆ 307 ಕೇಸ್ ಏಕೆ ಬುಕ್ ಮಾಡಿಲ್ಲ ಎಂದು ನಾನು ಸಬ್ ಇನ್ಸ್‌ಪೆಕ್ಟರ್‌ರವರನ್ನು ಕೇಳಿದರೆ. ಅದಕ್ಕೆ ಸಬ್ ಇನ್ಸ್‌ಪೆಕ್ಟರ್, ಅವರು ಆ ರೀತಿ ಕಂಪ್ಲೆಂಟ್ ಕೊಡಲಿಲ್ಲ ಸಾರ್ ಎಂದು ಹೇಳುತ್ತಾನೆ. ಅವನು ಕಂಪ್ಲೇಂಟ್ ಕೊಡಬೇಕಾಗಿತ್ತಂತೆ, 307 ಕೇಸ್ ಬುಕ್ ಮಾಡಿ ಎಂದು ಯಾರಾದರೂ ಕಂಪ್ಲೇಂಟ್ ಕೊಡುತ್ತಾರೆಯೇ? ತಿವಿದಿದ್ದಾನೆ, ಅವನೇ ಹೋಗಿ ನೋಡಿದ್ದಾನೆ ಇಷ್ಟೆಲ್ಲಾ ಆದರೂ ಕೂಡ ಅವನನ್ನು ಅರೆಸ್ಟ್ ಮಾಡಲಿಲ್ಲ. ಅವನನ್ನು ಅರೆಸ್ಟ್ ಮಾಡಬೇಕೆಂದು ಇಡೀ ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ಹೋರಾಟ ಮಾಡಿದ ಮೇಲೆ 26 ನೇ ತಾರೀಖು ಅರೆಸ್ಟ್ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೆ ಅಲ್ಲಿ ಏನು ಮಾಡಿದ್ದಾರೆ ಗೊತ್ತೇ?

ಮಾಮೂಲಿಯಾಗಿ ಯಾರನ್ನಾದರೂ ಪೊಲೀಸ್‌ನವರು ಅರೆಸ್ಟ್ ಮಾಡಿದರೆ ಕನಿಷ್ಠಪಕ್ಷ 12 ಗಂಟೆಯಾದರೂ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ಹೇಗೆ ಯೋಜನೆ ಮಾಡಿದ್ದರೆಂದರೆ, ಸ್ಟೇಷನ್‌ನಿಂದ ಊರಿನಲ್ಲಿ ಪ್ರತಿ ದಿವಸ ಏನೇನು ಆಗುತ್ತದೆ ಎಂಬುದರ ಬಗ್ಗೆ ಮೆಸೇಜ್ ಹೋಗುತ್ತಿತ್ತು, ಪೊಲೀಸ್‌ನವರು ಶಾಮೀಲಾಗಿ ಅವನನ್ನು ಪೊಲೀಸ್ ಠಾಣೆಗೆ 7.30ಕ್ಕೆ ಕರೆದುಕೊಂಡು ಬರುತ್ತಾರೆ. ನಂತರ 9.30ಕ್ಕೆ ಮ್ಯಾಜಿಸ್ಟ್ರೇಟರ್ ಮನೆಯ ಮುಂದೆ ಹಾಜರುಪಡಿಸಿ ಜುಡಿಷಿಯಲ್ ಕಸ್ಟಡಿಗೆ ಕಳುಹಿಸಿಬಿಡುತ್ತಾರೆ. ಬೇರೆ ಯಾರಾದರೂ ಮುಗ್ಧ ಅಪರಾಧಿಗಳಾದರೆ ಬೇಡಿ ಹಾಕಿಕೊಂಡು ಬೀದಿ ಬೀದಿಯಲ್ಲಿ ಕರೆದುಕೊಂಡು ಬರುತ್ತಾರೆ. ಅವನನ್ನು 7.30ಕ್ಕೆ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು 10 ಗಂಟೆಗೆ ಮ್ಯಾಜಿಸ್ಟ್ರೇಟರ್ ಮನೆಯಲ್ಲಿ ಪ್ರಡ್ಯೂಸ್ ಮಾಡಿದ್ದಾರೆ ನೋಡಿ ಸ್ವಾಮಿ. ಸನ್ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಆಲೋಚನೆ ಮಾಡಿ. ಇದು ಇಡೀ ನಾಗರಿಕ ಸಮಾಜ ತಲೆ ತಗ್ಗಿಸಬೇಕಾಗಿದೆ. ಎಂಗೇಜ್‌ಮೆಂಟ್ ಆಗಿರುವಂಥ ತನ್ನ ಬಾವಿ ಪತಿಯನ್ನು ಎಳೆದುಕೊಂಡು ಹೋಗಿ ಕೈ ಬೆರಳು ಕತ್ತರಿಸಿ ಅವಳನ್ನು ಎಳೆದುಕೊಂಡು ಅತ್ಯಾಚಾರ ಮಾಡಿದರೆ ನಾಲ್ಕು ದಿವಸಗಳಾದರೂ ಪೊಲೀಸ್‌ನವರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಅವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅಲ್ಲಿರುವ ಇಡೀ ಪೋಲೀಸ್ ಸ್ಟ್ಯಾಫ್ ಅದರಲ್ಲಿ ಇನ್‌ವಾಲ್ವ್ ಆಗಿದೆ. ಆದುದರಿಂದ, ನಾನು ಇವತ್ತು ಸರ್ಕಾರವನ್ನು ಕೇಳುವುದೇನೆಂದರೆ, ಶಿಡ್ಲಘಟ್ಟದಲ್ಲಿರುವ ಇಡೀ ಪೊಲೀಸ್‌ರವರ ಮೇಲೆ ನೀವು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು, ಅವರನ್ನು ಅಮಾನತ್ತಿನಲ್ಲಿಟ್ಟು ಡಿಸ್‌ಮಿಸ್ ಮಾಡಬೇಕು, ಅಲ್ಲಿಂದ ಮೊದಲು ಶಿಡ್ಲಘಟ್ಟದಿಂದ ಅವರನ್ನು ಜಾಗ ಖಾಲಿ ಮಾಡಿಸಬೇಕು. ಇದರ ಬಗ್ಗೆ ಸಮಗ್ರವಾದಂಥ ತನಿಖೆಯಾಗಬೇಕು. ಅವರಿಗೆ ಶಿಕ್ಷೆಯಾಗಬೇಕು, ಆ ಹೆಣ್ಣು ಮಗಳಿಗೆ ಸರ್ಕಾರ ಯಾವುದಾದರೂ ರೀತಿಯಲ್ಲಿ ಒಂದು ಕೆಲಸ ಕೊಡಿಸಿ ಆ ಹೆಣ್ಣು ಮಗಳು ಜೀವನ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಈಗಾಗಲೇ ಅವರು 15 ನಿಮಿಷಗಳ ಕಾಲ ಮಾತನಾಡಿದ್ದಾರೆ. ಸರ್ಕಾರದವರು ಇದರ ಬಗ್ಗೆ ಉತ್ತರ ಕೊಡುತ್ತಾರೆ, ಈ ರೀತಿಯಾದರೆ ಕಲಾಪಗಳನ್ನು ನಡೆಸುವುದು ಹೇಗೆ?

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೇ,

ಮಾನ್ಯ ಶ್ರೀರಾಮರೆಡ್ಡಿಯವರು ಶಿಡ್ಲಘಟ್ಟ ಅತ್ಯಾಚಾರದ ಬಗ್ಗೆ ಏನು ಪ್ರಸ್ತಾಪಿಸಿದ್ದಾರೆ ಇದು ಬಹಳ ಅತ್ಯಂತ ನೋವಿನ ಪ್ರಸಂಗ. ಹಿಂದೆ ಇದೇ ಸಂದರ್ಭದಲ್ಲಿ ಹೇಳುವುದಾದರೆ ಮಧುಗಿರಿ ಪ್ರಕರಣದಲ್ಲೂ ಕೂಡ ಈ ಅತ್ಯಾಚಾರ ಕಾಂಡ ಆಯಿತು. ಆಗ ಇಡೀ ಸರ್ಕಾರಕ್ಕೆ ಬಹಳ ತಲೆ ನೋವಾಯಿತು. ಆ ಸಂದರ್ಭದಲ್ಲಿ ಇದರ ಬಗ್ಗೆ ಇದೇ ಸದನದಲ್ಲಿ ಬಹಳ ಚರ್ಚೆ ನಡೆಯಿತು. 18 ನೇ ತಾರೀಖು ಅತ್ಯಾಚಾರ ನಡೆದಿದೆ 22 ನೇ ತಾರೀಖುವರೆಗೂ ಯಾರನ್ನೂ ಬಂಧಿಸುವುದಿಲ್ಲ, ಯಾರೂ ಅದರ ಬಗ್ಗೆ ಯೋಚಿಸುವುದಿಲ್ಲ. ಇಷ್ಟೆಲ್ಲಾ ನೋಡಿದಾಗ ಎಷ್ಟು ಬೇಜವಾಬ್ದಾರಿತನದಿಂದ ನೆಡೆದುಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆದುದರಿಂದ, ನಾನು ತಮಗೆ ಅತ್ಯಂತ ಕಳಕಳಿಯಿಂದ ಹೇಳುತ್ತೇನೆ, ಸರ್ಕಾರ ಪ್ರಾಮಾಣಿಕವಾಗಿದ್ದರೆ ಇದರ ಬಗ್ಗೆ ಸಂಪೂರ್ಣವಾಗಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ರೊಬ್ಬರಿಂದ ತಕ್ಷಣದಿಂದ ತನಿಖೆಯಾಗಲೇಬೇಕು. ಇದು ಕೂಡಲೇ ಆರಂಭವಾಗಬೇಕು, ಅದಕ್ಕೂ ಮುಂಚೆ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ, ಸದನ ಸಮಿತಿಯನ್ನು ನೇಮಿಸಿ ಶಿಡ್ಲಘಟ್ಟದಲ್ಲಿ ಏನು ನಡೆದಿದೆ ಆ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸರ್ಕಾರದ ಪರವಾಗಿ ಉತ್ತರ ಕೊಡಿ.

ಶ್ರೀ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಘಟನೆ ಬಗ್ಗೆ ಎಲ್ಲಾ ವಿಷದವಾಗಿ ಹೇಳಿದ್ದಾರೆ. ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ, ಅದಕ್ಕೆ ನಾನು ನಾಳೆ ದಿವಸ ಇದರ ಬಗ್ಗೆ ವಿವರವಾದ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ಜಿಲ್ಲಾ ಉಸ್ತುವಾರಿ ಸಚಿವರೊಬ್ಬರು ಇದ್ದಾರಲ್ಲವೆ ಅವರು ಈಗ ಹೇಳಬೇಕಾಗುತ್ತದೆ.

ಶ್ರೀ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ನಾಳೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ಶೂನ್ಯವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಅದಕ್ಕೆ ಈಗಲೇ ಇದೇ ರೀತಿಯಲ್ಲಿ ಉತ್ತರ ಹೇಳಬೇಕು ಎಂದರೆ ನಾನು ಏನು ಮಾಡಲಿ? ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದರ ಬಗ್ಗೆ ತನಿಖೆಯಾಗಬೇಕು, ಇದು ಬಹಳ ಗಹನವಾದ ವಿಷಯ. ಇಲ್ಲಿರುವಂಥ ಮಂತ್ರಿಗಳಿಗೆ ಗೊತ್ತು ಸ್ಥಳಕ್ಕೆ ಹೋಗಿದ್ದಾರೆ. ಈವರೆಗೆ ಒಬ್ಬ ಪೋಲೀಸ್‌ನವರ ಮೇಲೆ ಅವರು ಆ್ಯಕ್ಷನ್ ತೆಗೆದುಕೊಂಡಿಲ್ಲ ಕನಿಷ್ಠ ಪಕ್ಷ ಎಫ್‌ಐಆರ್ ಏಕೆ ಹಾಕಿಲ್ಲವೆಂದು ಕೇಳುವ ಕನಿಷ್ಠ ಸೌಜನ್ಯ ಈ ಸರ್ಕಾರಕ್ಕೆ ಇಲ್ಲ, ಹಾಗಾದರೆ ಯಾರು ಏನು ಬೇಕಾದರೂ ಮಾಡಬಹುದಾ? 12 ಗಂಟೆಗೆ ಹೋದರು 4 ಗಂಟೆಗೆ ಬಂದರು ಎನ್ನಬಹುದು, ನಾಳೆಯಿಂದ 9 ಗಂಟೆಗೆ ಹೋದರು 12 ಗಂಟೆಗೆ ಹೋದರು ಎಂದು ಪೋಲೀಸ್‌ನವರು ಈ ರಾಜ್ಯದಲ್ಲಿ ಈ ರೀತಿಯಾಗಿ ಉತ್ತರ ಕೊಡುವಂಥ ಸ್ಥಿತಿಗೆ ಈ ರಾಜ್ಯ ಸರ್ಕಾರ ಬಂದರೆ ಮುಂದೆ ಈ ರಾಜ್ಯದ ಗತಿ ಏನು? ಅಮಾಯಕರ ಗತಿ ಏನು? ಏನೋ ಶ್ರೀರಾಮರೆಡ್ಡಿ ಯವರು ಇಲ್ಲಿ ಕೇಳುವುದಕ್ಕೆ ಇದ್ದಾರೆ ಪರವಾಗಿಲ್ಲ. ಇಲ್ಲಂದ್ರೆ ಈ ರಾಜ್ಯದಲ್ಲಿ ಇಂಥ ಎಷ್ಟೋ ಹಗರಣಗಳು ಮುಚ್ಚಿ ಹೋಗುತ್ತವೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಸನ್ಮಾನ್ಯ ಕೃಷಿ ಸಚಿವರು ಅಲ್ಲಿಗೆ ಹೋಗಿದ್ದಾರೆ, ಮಾತನಾಡಿದ್ದಾರೆ, ನಂತರ ಸರ್ಕಾರವನ್ನು ತನಿಖೆಗೆ ಆದೇಶ ಕೊಡಿ ಎಂದು ಏಕೆ ಕೇಳಲಿಲ್ಲ?

ಅಧ್ಯಕ್ಷರು: ಮಾಧುಸ್ವಾಮಿಯವರು, ಈಗ ಮಾನ್ಯ ಶ್ರೀರಾಮರೆಡ್ಡಿ ಯವರು ವಿವರವಾಗಿ ಮಾತನಾಡಿದ್ದಾರೆ, ಮಾನ್ಯ ವಾಟಾಳ್ ನಾಗರಾಜ್ ರವರು ಸದನ ಸಮಿತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಾನು ಹೇಳುವುದು ಏನೆಂದರೆ, ನಾಳೆ ಸರ್ಕಾರದ ಪರವಾಗಿ ವಿವರವಾದ ಉತ್ತರವನ್ನು ಸಂಬಂಧಪಟ್ಟ ಖಾತೆಯ ಸಚಿವರು ಕೊಡಿ ಎಂದು ಹೇಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಗೃಹ ಖಾತೆಯನ್ನು ಹೊಂದಿರುವಂಥ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕು.

ಅಧ್ಯಕ್ಷರು: ಆಯಿತು. ಹಾಗಾದರೆ ನಾಳೆ ಗೃಹ ಖಾತೆ ಸಚಿವರು ಇದರ ಬಗ್ಗೆ ವಿವರವಾಗಿ ಉತ್ತರ ಕೊಡಬೇಕು, ಬಹಳ ಗಂಭೀರವಾದ ವಿಚಾರ. ಪತ್ರಿಕೆ ಗಳಲ್ಲಿ ಬಂದು ಇದು ಎಲ್ಲಾ ಆಗಿದೆ. ಆದುದರಿಂದ ಅವರು ಉತ್ತರ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾಳೆ ಉತ್ತರ ಕೊಡಿಸಿ ತೊಂದರೆಯಿಲ್ಲ, ಜವಾಬ್ದಾರಿ ಇರುವಂಥ ವರು ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿ ಇದ್ದಾರೆ. ಅವರು ಉತ್ತರ ಕೊಡಬೇಕೆಂದು ನಾನೇನು ಬಯಸುವುದಿಲ್ಲ. ಆದರೆ ನಾನೇನು

ಅಂದುಕೊಂಡಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಬಹಳ ದೊಡ್ಡ ಜವಾಬ್ದಾರಿ ಇದೆ ಎಂದುಕೊಂಡಿದ್ದೇನೆ. ಇಲ್ಲಾಂದ್ರೆ ಈ ವ್ಯವಸ್ಥೆನೇ ಬೇಡ ಅದರ ಅಗತ್ಯವೇ ಇಲ್ಲ. ಬೇಕಾದರೆ ಅದರ ಬಗ್ಗೆ ವಿಚಾರ ತೆಗೆದುಕೊಂಡು ನಾವು ಚರ್ಚೆ ಮಾಡೋಣ. ಇದು ನಾಮಕಾವಸ್ಥೆ ಪಟೇಲ್‌ರಗಿರಿ ಅಗತ್ಯವಿಲ್ಲ. ನಾನು ಕೇವಲ ಆ ಒಂದು ಜಿಲ್ಲೆಯ ಬಗ್ಗೆ ಮಾತನಾಡುತ್ತಿಲ್ಲ, ಇಡೀ ರಾಜ್ಯದಲ್ಲಿ ನಮ್ಮ ಅನುಭವ ಇದೆ ಆಗಿದೆ. ಪ್ರಶ್ನೆ ಏನೆಂದರೆ, ಈ ರೀತಿಯಾಗಿ ಹೆಣ್ಣು ಮಗಳ ಮೇಲೆ ಮಾನಾಪಹರಣ ಘಟನೆ ನಡೆದಾಗ ನಾವು ಕೇಸ್ ಬುಕ್ ಮಾಡಲಿಲ್ಲ. ಎಫ್‌ಐಆರ್ ಹಾಕಲಿಲ್ಲ. ತಕ್ಷಣ ಅವನನ್ನು ಬಂಧಿಸಲಿಲ್ಲ, ಅವರು ದೂರು ಕೊಟ್ಟರೂ ಅದನ್ನು ನೋಡುವವರು ಇಲ್ಲ. ಅವನನ್ನು ನಾಗರಿಕ ಸರ್ಕಾರ ಎಂದು ಕರೆಯಬೇಕೆ? ನಾವು ಎಲ್ಲರೂ ಗೌರವದಿಂದ ಬದುಕುವುದಕ್ಕೆ ಸಾಧ್ಯನಾ? ಈ ರೀತಿ ಆದರೆ ಮೆಸೇಜ್ ಏನು? ಏನು ಹೋಗಬಹುದು? ಎಲ್ಲಾ ಪತ್ರಿಕೆಗಳಲ್ಲಿ ಬಂದು ಎಲ್ಲಾ ಬಹಿರಂಗವಾಗಿರುವ ಸಂದರ್ಭದಲ್ಲಿ ಇದುವರೆಗೆ ಅವನನ್ನು ಬಂಧಿಸಿಲ್ಲ. ಅವನ ಮೇಲೆ ಕೇಸ್ ಹಾಕಿಲ್ಲ ಎಂದರೆ ಹೇಗೆ? ಇಂಥ ಘಟನೆಗಳು ಈ ರಾಜ್ಯದಲ್ಲಿ ನೂರೊಂದು ನಡೆದಿದೆ, ಕೊಲೆ ಸುಲಿಗೆ, ಮಾನಹರಣ, ಹೆಣ್ಣು ಮಕ್ಕಳು ಗೌರವದಿಂದ ರಸ್ತೆಯಲ್ಲಿ ಓಡಾಡುವುದಕ್ಕೆ ಆಗದೇ ಉಸಿರುಕಟ್ಟುವಂಥ ಪರಿಸ್ಥಿತಿ ಬಂದಿದೆ ಎಂದು ಹೇಳುವುದಾದರೆ, ಸರ್ಕಾರ ಈ ಬಗ್ಗೆ ಸ್ಪಷ್ಟವಾದ ಕ್ರಮ ತೆಗೆದುಕೊಂಡಿದೆ ಎಂದು ಎದ್ದು ನಿಂತು ಹೇಳುವಂಥ ಸ್ಥಿತಿಯಲ್ಲಿ ಇಲ್ಲ ಅಂದರೆ ಹೇಗೆ? ನಾಳೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಲಿ. ಆದರೆ ನಿಮ್ಮ ಜಿಲ್ಲಾ ಉಸ್ತುವಾರಿ ಸಚಿವರು, ಹೌದು. ಜವಾಬ್ದಾರಿ ಸ್ಥಾನದಲ್ಲಿರುವಂಥ ಮಾನ್ಯ ಶ್ರೀರಾಮರೆಡ್ಡಿಯವರು ಎದ್ದು ವಿವರವಾದ ಮಾಹಿತಿಯನ್ನು ಕೊಡುತ್ತಾರೆ ಎಂದಾಗ ಇದುವರೆವಿಗೂ ಕ್ರಮ ತೆಗೆದುಕೊಳ್ಳದಿದ್ದರೆ ಬಹುಶಃ ಈ ಸರ್ಕಾರ ನೈತಿಕವಾಗಿ ಅವರು ಅಧಿಕಾರದಲ್ಲಿ ಮುಂದುವರೆಯಬಹುದಾ? ಈ ಪೊಲೀಸ್ ಇಲಾಖೆ, ಗೃಹ ಇಲಾಖೆ ಇದಿಯೇ? ಹೇಳುವವರು ಕೇಳುವವರು ಯಾರಾದರಾ ಇದ್ದಾರೋ ಇಲ್ಲವೋ? ಇದರ ಜೊತೆಗೆ ಆ ದೊಡ್ಡ ಪೊಲೀಸ್ ಅಧಿಕಾರಿ ಅಲ್ಲಿಗೆ ಹೋಗಿ ಬಿಟ್ಟು ನೋಡಿದ ಮೇಲೂ ಅಲ್ಲಿ ಕ್ರಮ ತೆಗೆದುಕೊಳ್ಳದೇ ಉದ್ಧಟತನದಿಂದ ಬೇರೆ ರೀತಿಯ ವರ್ತನೆ ಮಾಡುತ್ತಾರೆ. ಉತ್ತರ ಕೊಡುತ್ತಾರೆ. ಯಾವುದನ್ನು ಸೀರಿಯೆಸ್ಸಾಗಿ ತೆಗೆದುಕೊಳ್ಳುವುದಿಲ್ಲವೆಂದರೆ ಏನರ್ಥ? ಮಾನ್ಯ ಶ್ರೀ ರಾಮರೆಡ್ಡಿಯವರಂಥವರು ಪ್ರಸ್ತಾಪಿಸಿದಾಗ ಆ ಪೊಲೀಸ್ ಅಧಿಕಾರಿಗಳು ಹಗುರವಾಗಿ ಉತ್ತರ

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ರಾಂರೆಡ್ಡಿಯವರು ಈ ವಿಚಾರ ಹೇಳಿದ ಹಾಗೆ ಘಟನೆ ನಡೆದ ಎರಡನೇ ದಿವಸವೇ ನಾನು ಕ್ರಮ ಜರುಗಿಸಿದ್ದೇನೆ. ನಾನು ಐಜಿಪಿ ಯವರನ್ನು ಅಲ್ಲಿಗೆ ಕಳುಹಿಸಿ, ಅದುವರೆವಿಗೂ ಈ ವಿಚಾರ ಐಜಿಪಿಯವರಿಗೂ ಗೊತ್ತಿರಲಿಲ್ಲ, ನನಗೆ ಗೊತ್ತಾದ ಮೇಲೆ ತಕ್ಷಣವೇ ಐಜಿಪಿಯವರಲ್ಲಿಗೆ ಹೋಗಿ ನೋಡ್ರಿ ಇದೇನು ಆಗಿದೆಯಂತೆ ಅವನನ್ನು ಅರೆಸ್ಟ್ ಮಾಡುವಂತೆ ಸೂಚನೆ ಕೊಟ್ಟೆ. 19 ನೇ ತಾರೀಖು ಕೊಟ್ಟೆ.

ಶ್ರೀ ಕೆ. ಶ್ರೀನಿವಾಸಗೌಡ: (ಮುಂದು) ಅವರು 20ನೇ ತಾರೀಖಿನದಿವಸ ಅಲ್ಲಿಗೆ ಹೋಗಿ ಅಲ್ಲಿ ಎಲ್ಲವನ್ನು ನೋಡಿ ಇದರ ಬಗ್ಗೆ ಕೇಸ್ ರಿಜಿಸ್ಟ್ರೇಷನ್ ಆಗಿರತಕ್ಕಂಥದ್ದನ್ನೂ ಕೂಡ ನೋಡಿಕೊಂಡು ಮತ್ತು ಈ ಕೇಸ್‌ಗೆ ಸಂಬಂಧಪಟ್ಟಂತೆ ಆ ಮಗು ಹೇಳಿಕೆ ಕೊಟ್ಟಿರತಕ್ಕಂಥ ಮಾಹಿತಿ ಎಫ್‌ಐಆರ್ ನಲ್ಲಿ ಡೀಟೇಲ್ ಆಗಿ ಇದೆಯೇ ಎಂಬುದನ್ನು ಕೂಡ ನೋಡಿದ್ದಾರೆ. ಇದೆಲ್ಲಾ ಆದ ಮೇಲೆ ಆ ಮನುಷ್ಯ ಏನು ತಿಳಿದು ಕೊಂಡಿದ್ದಾನೆಂದರೆ, ಆ ಹೆಣ್ಣು ಮಗುವಿನ ಹತ್ತಿರ ನಾನು ಹೋದರೆ ನನ್ನ ಜೊತೆಯಲ್ಲಿ ಪ್ರೆಸ್‌ನವರು ಕ್ಯಾಮರ ತೆಗೆದುಕೊಂಡು ಬಂದು ಆ ಹೆಣ್ಣು ಮಗುವಿನ ಫೋಟೋ ತೆಗೆಯುವುದರಿಂದ ಆ ಮಗುವಿನ ಬಗ್ಗೆ ಬ್ಯಾಡ್ ಮೆಸೇಜ್ ಹೋಗುತ್ತದೆ ಎಂಬ ಒಂದು ಕಾರಣದಿಂದ ಅವತ್ತು ಐಜಿಪಿರವರು ಅಲ್ಲಿಗೆ ಹೋಗಿಲ್ಲ. ನೆಕ್ಸ್ಟ್‌ಡೇ ಅಂದರೆ ಎರಡನೇ ದಿವಸ ನಾನು ಹೋದಾಗ ನನ್ನ ಜೊತೆಯಲ್ಲಿ ಪ್ರೆಸ್‌ನವರು ಬರಬಾರದೆಂದು ಹೇಳಿ ಆ ಮಗುವಿನ ಜೊತೆ ಮಾತನಾಡಿ ಕೊಂಡು ಬಂದಿದ್ದೇನೆ. ಮತ್ತೆ ಅಲ್ಲಿ ಎಲ್ಲವನ್ನೂ ನೋಡಿಕೊಂಡು ಬಂದಿರ ತಕ್ಕಂಥದ್ದು ನಿಜ. ಆ ಮಗುವಿನ ಮೇಲೆ ಇಬ್ಬರು ಹುಡುಗರು ಅತ್ಯಾಚಾರ.ಮಾಡಿರತಕ್ಕಂಥದ್ದು ನಿಜ. ಮತ್ತೆ ಆ ಮಗುವಿನ ಫೋಟೋ ತೆಗೆದಿರ ತಕ್ಕಂಥದ್ದೂ ಕೂಡ ನಿಜ, ಈಗಾಗಲೇ ಆ ಇಬ್ಬರು ಹುಡುಗರನ್ನು ಅರೆಸ್ಟ್ ಮಾಡಿದ್ದು ಅವರು ಈಗ ಜೈಲಿನಲ್ಲಿದ್ದಾರೆ. ಆದ್ದರಿಂದ, ಇದನ್ನು ಜಿಲ್ಲಾ ಮಂತ್ರಿಗಳು ನೋಡಿಲ್ಲ. ಏನು ಮಾಡಿಲ್ಲವೆಂದು ಹೇಳತಕ್ಕಂಥದ್ದು ಸತ್ಯಕ್ಕೆ ದೂರವಾದ ವಿಷಯವನ್ನು ಹೇಳತಕ್ಕಂಥದ್ದಾರಲ್ಲಿ ಏನರ್ಥವಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, 25ನೇ ತಾರೀಖಿನದಿವಸ ಮಾನ್ಯ ಉಸ್ತುವಾರಿ ಸಚಿವರು ಅಲ್ಲಿಗೆ ಬಂದಿರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ದಯವಿಟ್ಟು ತಾವು ಒಂದು ನಿಮಿಷ ಸುಮ್ಮನೆ ಇರಬೇಕು. ಏಕೆಂದರೆ, ನೀವು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಸುಮ್ಮನೆ ಇರಲಿಲ್ಲವೆ. ಆದ್ದರಿಂದ ನಾನು ಮಾತನಾಡುವಾಗ ತಾವು ಸುಮ್ಮನೆ ಇರಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಉಸ್ತುವಾರಿ ಸಚಿವರು 23ನೇ ತಾರೀಖಿನ ದಿವಸ ಆ ಕಡೆ ಬಂದಿಲ್ಲ.....

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಮೊದಲು ಉತ್ತರ ಕೊಡಲಿ. ಆನಂತರ ತಾವು ಕೂಡ ಮಾತನಾಡಬಹುದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಏನು ಹೇಳಿದ್ದಾರೆಂದರೆ. .

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ ಮತ್ತು ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ. ಅವರು ಹೇಳತಕ್ಕಂಥದ್ದರಲ್ಲಿ ಏನಾದರು ಅಸತ್ಯವಿದ್ದರೆ ಅದರ ಬಗ್ಗೆ ತಾವೂ ಆನಂತರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರು ಮಾತನಾಡುವಂಥ ಸಂದರ್ಭದಲ್ಲಿ ನೀವುಗಳು ಮಧ್ಯೆ ಮಾತನಾಡುವುದಕ್ಕೆ ಪ್ರವೇಶ ಮಾಡಿದರೆ ಅವರು ಏನು ಮಾತನಾಡುತ್ತಾರೆ ಎನ್ನತಕ್ಕಂಥದ್ದು ಯಾರಿಗೂ ಕೂಡ ಅರ್ಥವಾಗುವುದಿಲ್ಲ. ಮತ್ತೆ ಸತ್ಯ ಕೂಡ ಹೊರಗಡೆಗೆ ಬರುವುದಿಲ್ಲ. ಆದ್ದರಿಂದ, ಅವರು ಮೊದಲು ಮಾತನಾಡಲಿ, ಆನಂತರ ತಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು: ಮೊದಲು ಅವರು ಮಾತನಾಡಿ ಮುಗಿಸಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎರಡು ದಿವಸವಾದರೂ ಕೂಡ ಐಜಿಪಿಗೆ ಗೊತ್ತಿರಲಿಲ್ಲವೆಂದು ಮಾನ್ಯ ಸಚಿವರು ಅಡ್ಮಿಟ್‌ಮಾಡಿಕೊಂಡಿದ್ದಾರೆ. ಈ ರೀತಿಯಾದ ಒಂದು ಘಟನೆಯಲ್ಲಿ ಒಬ್ಬ ಅಪ್ರಾಪ್ತ ಬಾಲಕಿಯ ಮೇಲೆ ಈ

ರೀತಿಯಾಗಿ ಮಾನಹರಣ ದುರ್ಘಟನೆ ನೆಡದಾಗಿ ಎರಡು ದಿವಸವಾದರೂ ಅಲ್ಲಿರತಕ್ಕಂಥ ಐಜಿಪಿರವರಿಗೆ ಮತ್ತು ಪೊಲೀಸ್ ಇಲಾಖೆಗೆ ಗೊತ್ತಿಲ್ಲವೆಂದು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೇ ಹೇಳುವುದಾದರೆ ಪೊಲೀಸ್ ಇಲಾಖೆ ಬದುಕಿದೆಯೇ ಎಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಸಚಿವರು ಉತ್ತರ ಕೊಟ್ಟು ಮುಗಿಸಲಿ. ಮಧ್ಯದಲ್ಲಿ ಯಾರು ಮಾತನಾಡಬೇಡಿ. ಈಗ ಮಾನ್ಯ ಶ್ರೀನಿವಾಸ ಗೌಡರು ಉತ್ತರ ಕೊಡಲಿ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, 19ನೇ ತಾರೀಖಿನ ದಿವಸ...

ಅಧ್ಯಕ್ಷರು: ಮಾನ್ಯ ರಾಜೇಂದ್ರನ್‌ರವರೆ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ,

ಶ್ರೀ ಎಸ್ ರಾಜೇಂದ್ರನ್(ಕೆ.ಜಿ.ಎಫ್): ಮಾನ್ಯ ಸಭಾಧ್ಯಕ್ಷರೇ, 19ನೇ ತಾರೀಖಿನದಿವಸ ಐಜಿಪಿರವರಿಗೆ ಫೋನ್ ಮಾಡಿದ್ದಾರೆ. ಅವರು 21ನೇ ತಾರೀಖಿನದಿವಸ ಅಲ್ಲಿಗೆ ಹೋಗಿದ್ದಾರೆಂದರೆ, Is it the efficiency of the police Department? ತಾವೇ ಹೇಳಿ You said very clearly the responsible Minister In charge Phoned up to the IG ಅಲ್ಲಿಗೆ ಹೋಗಿ ಎಂದು ಹೇಳಿದ್ದರೂ ಕೂಡ ಅವರು 21 ನೇ ತಾರೀಖಿನದಿವಸ ಹೋಗಿದ್ದಾರೆಂದರೆ ನಿಜವಾಗಿಯೂ ಕೂಡ It shows the inefficiency of the police Department.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ನಾನು 19ನೇ ತಾರೀಖಿನದಿವಸ ಐಜಿಪಿರವರಿಗೆ ಸೂಚನೆ ಕೊಟ್ಟಮೇಲೆ ನೆಕ್ಸ್ಟ್‌ಡೇ ಅವರು ಅಲ್ಲಿಗೆ ಹೋಗಿ ಸಾಯಂಕಾಲದವರೆಗೆ ಅವರು ಅಲ್ಲಿಯೇ ಇದ್ದು ಅವತ್ತು ಸಾಯಂಕಾಲ ಅಲ್ಲಿ ತಂಗದೆ ಅವರು ಚಿಕ್ಕಬಳ್ಳಾಪುರಕ್ಕೆ ಬಂದು ತಂಗಿದ್ದಾರೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 19ನೇ ತಾರೀಖಿನ ದಿವಸ ಅವರು ಬಂದಿಲ್ಲ. ಅವರು 21ನೇ ತಾರೀಖು ಬಂದಿದ್ದಾರೆ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನೀವು ಮಧ್ಯದಲ್ಲಿ ಭಾಗವಹಿಸುವುದಕ್ಕೆ ಹೋಗಬೇಡಿ. ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ. ತಾವು ಕುಳಿತುಕೊಳ್ಳಿ. ಅನಂತರ ತಾವೂ ಕೂಡ ಮಾತನಾಡುವುದಕ್ಕೆ

ಅವಕಾಶ ಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಅವತ್ತಿನ ಅಲ್ಲಿನ ಸಿಚ್ಯುವೇಶನ್‌ನ್ನು ಐಜಿಪಿರವರು ನೋಡಿಕೊಂಡು ಬಂದು ಚಿಕ್ಕಬಳ್ಳಾಪುರದಲ್ಲಿ ಆಲ್ಟ್ ಮಾಡಿದ್ದಾರೆ. ಅವರು ಅವತ್ತಿನ ದಿವಸ ಶಿಡ್ಲಘಟ್ಟದಲ್ಲಿ ಆಲ್ಟ್ ಮಾಡದೆ ಚಿಕ್ಕಬಳ್ಳಾಪುರಕ್ಕೆ ಹೋಗಿ ಆಲ್ಟ್ ಮಾಡಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ನೆಕ್ಸ್ಟ್‌ಡೇ ಜನ ಅಟ್ಯಾಕ್ ಮಾಡಿದ ಮೇಲೆ ಅಲ್ಲಿ ಫೈರಿಂಗ್ ಆಗಿರತಕ್ಕಂಥದ್ದು ನಿಜ. ಇದಾದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾನು ಆಸ್ಪತ್ರೆಗೆ ಹೋಗಿ ಅವರನ್ನು ನೋಡಿದ್ದೇವೆ. ಅನಂತರ ನಾನು ತಕ್ಷಣ ಅಲ್ಲಿಗೆ ಹೋಗಿ ಶಾಂತಿ ಸಭೆ ಕರೆದು ಸ್ವಲ್ಪ ಸಮಾಧಾನ ಮಾಡಿ, ಅನಂತರ ಆ ಮಗುವನ್ನು ನೋಡಿ ಆ ಮಗುವಿಗೆ ಧೈರ್ಯ ಕೂಡ ಹೇಳಿ ಬಂದಿದ್ದೇನೆ. ಮತ್ತೆ ಅವತ್ತು ಸರ್ಕಾರದ ಪರವಾಗಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನು ಕೂಡ ಮಾಡಿ ಬಂದಿದ್ದೇನೆ. ಇದು ಈಗ ಅವರಿಬ್ಬರನ್ನು ಅರೆಸ್ಟ್ ಮಡಲಾಗಿದೆ. ಈಗ ಅವರು ಜೈಲಿನಲ್ಲಿದ್ದಾರೆ. ಮತ್ತೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ, ಇವರನ್ನು ಒಳಗೆ ಕಳುಹಿಸಿರುವ ಬಗ್ಗೆ ಮತ್ತು ಮ್ಯಾಜಿಸ್ಟ್ರೇಟ್ ಮುಂದೆ ಕಳುಹಿಸಿಕೊಟ್ಟಿರತಕ್ಕಂಥದ್ದರಲ್ಲಿ ಏನಾದರು ಇದ್ದಲ್ಲಿ ಇದರ ಬಗ್ಗೆ ಒಂದು ತನಿಖೆ ಮಾಡಲೆಂದು ಡಿವಿಜನಲ್ ಮ್ಯಾಜಿಸ್ಟ್ರೇಟ್ ಹಂತದಲ್ಲಿ ತನಿಖೆ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇನೆ. ಈಗ ತನಿಖೆ ಕೂಡ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನೇನು ಮಾಡುವುದಕ್ಕೆ ಅವಶ್ಯಕತೆ ಇದೆಯೋ, ಅಗತ್ಯತೆ ಇದೆಯೋ ಅವೆಲ್ಲವನ್ನೂ ಕೂಡ ಸರ್ಕಾರ ಮಾಡಿದೆ. ಆದ್ದರಿಂದ ಸರ್ಕಾರ ಎಲ್ಲಿಯೂ ಕೂಡ ಫೇಲ್ ಆಗಿಲ್ಲ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಶ್ರೀರಾಮ ರೆಡ್ಡಿಯವರು ಮಧ್ಯದಲ್ಲಿ ಮಾತನಾಡುವುದು ಬೇಡ. ಇದರ ಬಗ್ಗೆ ಡೀಟೇಲ್ ಮಾಹಿತಿ ಬೇಕಾದರೆ ನಾಳೆದಿವಸ ವರದಿ ತರಿಸಿ ಕೊಡುವುದಕ್ಕೆ ಸರ್ಕಾರ ಸಿದ್ದವಾಗಿದೆ ಎಂದು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ

ಅಧ್ಯಕ್ಷರು: ಆಯಿತು. ಈಗ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಲು ಮಾನ್ಯ ಸದಸ್ಯರಾದ ಶಕುಂತಲಾ ಟಿ. ಶೆಟ್ಟಿರವರಿಗೆ ಅವಕಾಶ